doc-48
T.P-10

Regd No M 1299 34 th Year ಶನಿ 7—5—51

SATYAVADI

ಸತ್ಯವಾದಿ

ಸ್ಥಾಪಕರು: ಆರಮನೆ ಸಿರಸ್ತೆದಾರ್ ಎಂ. ವಿ. ಸುಬ್ರಾಯರು | ಬಿಡಿ ಪ್ರತಿ 3 ಪೈ

ಕಾಂಗ್ರೆಸ್ಸು ಮುಖಂಡರೆಲ್ಲರೂ

ಶುದ್ಧೀಕರಣ ಮಂತ್ರ ಜಪದಲ್ಲಿ ತಲ್ಲೀನರಾಗಿರುತ್ತಾಗಿ

ಸಾರ್ವತ್ರಿಕ ಕೂಗು ಕೇಳಿಬಂತಲ್ಲಿಂದ. ಮಂತ್ರಾವೃತ್ತಿಯು ಹೆಚ್ಚಿದಂತೆ ದೋಷವು ಬೆಳೆಯುತ್ತಲಿರುವುದು ಅತಿ ವಿಚಿತ್ರವಾಗಿದೆ. ಅಂದು ಜನಪ್ರತಿನಿಧಿ ಸಂಸ್ಥೆಯಾಗಿ ಬಾಳಿದ ಕಾಂಗ್ರೆಸುದಂಗವು ಇಂದು ದುಸ್ತಾದ್ವೇಷಕ್ಕೆ ಪೂರ್ಣ ಪಾತ್ರವಾಗಿದೆ. ಈ ವಿಷಯವನ್ನು ಅರಿತಿದ್ದರೂ ಈವರೆಗೆ ಶುದ್ಧೀಕರಣದ ಜಪ್ಪಾಪಕವು ಬಾಲಿಲ್ಲ. ಇಂದು ಮುಂದಿನ ಚುನಾವಣಾ ರಂಗಸ್ಥಳವು ಸಮೀಪಿಸುವಾಗ "ಸಂಕಟ ಬಂದಾಗ ನೆಂಕಟೇಮಣ" ಎಂಬಂತೆ ಶುದ್ಧೀಕರಣ ಮಂತ್ರಜಪಕ್ಕೆ ಅಂಭಿಸಿದುದು ಅತಿ ವಿಚಿತ್ರ ವರ್ತನೆಯಾಗಿದೆ. ನಿಜವಾದ ಪಶ್ಚಾತ್ತಾಪದಿಂದ ಶುದ್ಧೀಕರಣವನ್ನು ಅಪೇಕ್ಷಿಸಬಹುದು ಒಪ್ಪಿಬ್ಬರಿದ್ದರೆ ಹಲವರು ಈ ಮಂತ್ರ ಜಪದಿಂದಲಾದರೂ ಇನ್ನೊಮ್ಮೆ ಅಧಿಕಾರಸದಾರೂಢರಾಗಬಹುದೆಂಬ ಭಾವನೆಯಿಂದಲೇ ಮಂತ್ರಜಪಕ್ಕೆ ಆರಂಭಿಸಿದವರಾಗಿರುತ್ತಾರೆ. ಜನತೆಯಾದರೂ ಇಂದಿನ ಮೂರು ವರ್ಷಗಳ ಅಡಳಿತದ ಅನ್ನವಸ್ತ್ರ, ಜೀವನ ನಿರ್ವಹಣದ ದುರವಸ್ಥೆಗಳನ್ನು ಮರೆತಿರಲಿಕ್ಕಿಲ್ಲ! ಈ ನೂರು ವರ್ಷಗಳೆಲ್ಲಿ ನಮ್ಮ ಮುಖಂಡರು ಮಾಡಿದ ಪೈಹತ್ಯಾಕಾರ್ಯಗಳೆಂದರೆ ಧರ್ಮದ್ರೋಹ, ಬ್ಲಾಕ್ ಮಾರ್ಕೆಟ್, ಸ್ವಾರ್ಥ ಸಾಧನೆಗಳಲ್ಲದೆ ನಿಜವಾಗಿ ದೇಶಹಿತ, ಧರ್ಮರಕ್ಷಣಾಕಾರಿ ಕಾರ್ಯಗಳು ಆವುವೆಂದೂ ತೋರಬರುವುದಿಲ್ಲ. ವಿರೋಧೀ ಪಕ್ಷದ ಬೆದರಿಕೆಯೇ ಕಾಂಗ್ರೆಸ್ಸು ಶುದ್ಧೀಕರಣದ ಪರಮೌಷಧವೆಂಬುದಾಗಿ ಅಧ್ಯಕ್ಷ ಮಹಾಶಯರ ಸ್ವಪ್ರೇರಣೆಯಿಂದ ಹೇಳಲ್ಪಡುವುದನ್ನು ಎಲ್ಲಾ ಪ್ರತಿನಿಧಿ ಮುಖಂಡರೂ ಜ್ಞಾಪಕದಲ್ಲಿಟ್ಟುಕೊಳ್ಳಲಿ!

— ಧರ್ಮಜೋಧ

ಉಡ್‌ಲಾಂಡ್
ಶಿಸು
ಅಮೋಘ 2 ನೇ ವಾರ
ಹನುಮಾನ್ ಪಾತಾಳ ವಿಜಯ
ಪಾತ್ರ: ವಿಜಯಕುಮಾರಿ, ಮಹಿಪಾಲ
— ಪ್ರತಿದಿನ 3 ಆಟಗಳು —

ರಣಜಿತ್ ಮನರಂಜನ 3 ನೇ ವಾರ
PARDES ಪರದೇಸ್
ಮಧುಬಾಲ, ರೆಹಮಾನ್ ಶಕುಂತಳಾ, ಜಗದೀಶ ಸೇಠಿ, ಕರ್ಣದಿವಾನ
ವಿಶೇಷವಹಿಸಿರುವ ಸೊಬಗಿನ ಹಿಂದಿ ಚಿತ್ರ
— ಪ್ರತಿದಿನ 3 ಪ್ರದರ್ಶನಗಳು —

ಖಾನೆಷುಮಾರಿ ಬದಲಾವಣೆ

ನ್ಯೂಯಾರ್ಕ್— ವೆ.ಕಾರ್ಥರರ ಆತ್ಮ ಚರಿತ್ರೆಗಾಗಿ ಅವರಿಗೆ 50 ಲಕ್ಷ ಡಾಲರುಗಳನ್ನು ಕೊಡಲು ಕೆಲವರು ಮುಂದೆ ಬಂದಿದ್ದರೆಂದು ಅವರ ವಕ್ತಾರರಾದ ಮೇಜರ್ ಜನರಲ್ ಕೋರ್ಟನೆಯವರು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

ನವದೆಹಲಿ— ಈಗ ವಿಸರ್ಜಿಸಲ್ಪಟ್ಟ ಕಾಂಗ್ರೆಸ್ ಡೆಮೊಕ್ರಾಟ್ ಪ್ರಂಟಿನವ ಪ್ರತ್ಯೇಕ ಅಖಿಲ ಭಾರತ ಪಕ್ಷವೊಂದನ್ನು ರಚಿಸುವುದು ಅನಿವಾರ್ಯವೆಂದು ವಾರ್ಲನೆಂಟು ಸದಸ್ಯ ಶ್ರೀ ಸಕ್ಸೇನಾ ಪ್ರಕಟಿಸಿರುವರು

ಹುಬ್ಬಳ್ಳಿ— ಕರ್ನಾಟಕ ಕಾಂಗ್ರೆಸಿಗರ ಮುಂದಾಧಿವೇಶನವನ್ನು ಇದೇ ತಿಂಗಳು ಕಡೆಯಲ್ಲಿ ನಡೆಸಲು ಏರ್ಪಾಡುಗಳು ಜರುಗುತ್ತಿವೆ

ನವದೆಹಲಿ— ಇಲ್ಲಿಗೆ 27 ಮೈಲಿ ದೂರದಲ್ಲಿರುವ ಪೂರ್ವ ಪಂಜಾಬಿನ ಸೋನಸೇಟಿ ಎಂಬಲ್ಲಿ ವರ್ಷಕ್ಕೆ 1ಲಕ್ಷ ಸೈಕಲ್ ತಯಾರಿಸಬಲ್ಲ ಕಾರ್ಖಾನೆ ಸಧ್ಯದಲ್ಲೇ ಸ್ಥಾಪಿಸಲ್ಪಡುವುದೆಂದು ಸರಬರಾಜು ಮಂತ್ರಿ ಹೇಳಿದಾರೆ.

ಈಜಿಪ್ಟು ಅರಸು ಫಾರೂಕರವರ ವಿವಾಹವು ನಿನ್ನೇ ವೈಭವದಿಂದ ಜರುಗಿತು. ಅರಸು ಕಮ್ಮ 17 ವರ್ಷದ ರಾಣಿಗೆ ಸೈಲ ನನಿಯ ಮುಖದ ಭೂಮಿಯಲ್ಲಿ ತನಗೆ ಸೇರಿರುವ 3 ಸಾವಿರ ಎಕ್ರೆ ಜಮೀನಾನನ್ನು ಒಳುವಳಿ ಕೊಡುವನು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯನ್ನು ಆಚಾರ್ಯ ಕೃಪಾಲಿನಿ ಪಾರ್ಟಿಯವರ ಸೂಚಿಸಿದ ರೀತಿಯಲ್ಲಿ ಪುನರ್ರಚಿಸಲು ಸಾಧ್ಯವಿಲ್ಲವೆಂದು ಕಾ॥ ಅ॥ ತಾಂಡನ್ನರು ತಿಳಿಸಿರುವಂತೆ.

ಬೆಂಗಳೂರು ಸಿಟಿ, ಸಿವಿಲ್ ಸ್ಟೇಷನ್ ಮತ್ತು ಮೈಸೂರು ಸಿಟಿಯಲ್ಲಿ ಸೀಮೆಂಟು ಸರಬರಾಜಿನ ಸ್ಥಿತಿ ಕೆಟ್ಟಿರುವುದರಿಂದ, ಈ ಸ್ಥಳಗಳಲ್ಲಿನ ಸೀಮೆಂಟು ದಾಸ್ತಾನುದಾರರು ಪರ್ಮಿಟ್ ಇಲ್ಲದೆ 2 ಟನ್‌ಗಳವರೆಗೆ ಮಾರಬಹುದೆಂದು ಮಾಡಲಾಗಿದ್ದ ಆರ್ಡರನ್ನು ಮನ್ನಾ ಮಾಡಿದೆಯೆಂದೂ, ಸೀಮೆಂಟು ಬೇಕಾದವರು ಸಿವಿಲ್ ಸಪ್ಲೈ ಕಂಟ್ರೋಲರು ಅಥವಾ ರೆವಿನ್ಯೂ ಅಧಿಕಾರಿಗಳಿಗೆ ಖುದ್ದಾಗಿ ಬರೆದುಕೊಳ್ಳಬೇಕೆಂದೂ ಸರ್ಕಾರಿ ಪ್ರಕಟಣೆ ತಿಳಿಸುತ್ತದೆ.

ದಿವ್ಯವಾಣಿ

ಅಧಿಕಾರಿಗಳು ಜನತೆಯ ನಮ್ರ ಸೇವಕರು. — ಗಾಂಧೀಜಿ

ಪತ್ರಿಕಾ ಸಂಮೇಳನ

ಮೈಸೂರು: ಖಾನೇಷುಮಾರಿ ನವದಿ ಈ ಬಾರಿ ಕಳೆದ ಬಾರಿಯಂತಿರುವುದಿಲ್ಲ. ಅಷ್ಟು ದೊಡ್ಡದಾಗಿಯೂ ಇರುವುದಿಲ್ಲ — ಎಂದು ಮೈಸೂರು ಸಂಸ್ಥಾನದ ಖಾನೇಷುಮಾರಿ ಅಧಿಕಾರಿಯವರಾದ ಶ್ರೀ ಜೆ. ಬಿ. ಮಲ್ಲಾರಾಧ್ಯರವರು ಈ ಬೆಳಿಗ್ಗೆ ಮೈಸೂರು ಪೌರಸಭೆಯಲ್ಲಿ ಕರೆಯಲಾಗಿದ್ದ ಪತ್ರಿಕಾ ಸಂಮೇಳನದಲ್ಲಿ ತಿಳಿಸಿದರು

ಭಾರತದಲ್ಲಿ ಮಹಿಳೆಯರಿಂ ಸಂಖ್ಯೆ ಕಡಿಮೆಯಾಗಿರುವುದಲ್ಲ ಎಂಬ ಪ್ರಶ್ನೆಗೆ ಅವರು ಮಾಡಿಕೊಳ್ಳಬೇಕಾಗುವದು ಎಂದು ವಿನೋದವಾಗಿ ಉತ್ತರವಿತ್ತರು

ಸಂತಾನ ನಿರೋಧಕ್ರಮ ಭಾರತೀಯರಿಗೆ ಸಂಪ್ರದಾಯ ವಿರೋಧ ಆ ಬಗ್ಗೆ ಮೈಸೂರು ಸರ್ಕಾರ ಯಾವ ತೀರ್ಮಾನ ಸಹ ಮಾಡಿಲ್ಲ ಎಂದವರು ತಿಳಿಸಿದರು.

ಸುದ್ದಿಗಳು

ಜಾಸನ— ಪೌರಸಭಾಧ್ಯಕ್ಷರ ವೇತನ ಕೆಲಸದಸ್ಯರು ಅವಿಶ್ವಾಸ ಸೂಚಿಸಿ ವಿಶೇಷ ಸಭೆ ಕರೆಯಬೇಕೆಂದಿದಾರೆ.

ಸ್ವೀಡನ್ನಿನಲ್ಲಿ ವಿವಾಹ ವಿಚ್ಛೇದಿತಳಾದ ಸ್ತ್ರೀಯು ತನ್ನ ಹಿಂದಿನ ಗಂಡನಿಗೆ ಅವಶ್ಯವಿದ್ದಲ್ಲಿ ಭತ್ಯಕೊಡಬೇಕೆಂಬ ಕಾನೂನಿದೆ.

ಅಮೇರಿಕಾದ ಆರ್ಥಿಕ ಸಹಕಾರ ವರ್ಗದವರು ಬರ್ಮಾಸ್ವವಾಹ ತಡಗಟ್ಟಲು 59 ಸಾವಿರ ಡಾಲರ್ ಕೊಟ್ಟರು.

ಮಹಾ ಗ್ವಾಲಿಯರ್‌ನಲ್ಲಿ ಮಹಿಳಾ ಸಂಸ್ಥೆಗಳೆಲ್ಲ ಸಭೆ ಕೂಡಿ ಇತ್ತೀಚಿಗೆ ಗ್ವಾಲಿಯರ್‌ನಲ್ಲಿ ನಡೆಯಬೇಕಿದ್ದ ಮಹಿಳೆಗಾಗಿ ದಿನವಿಲ್ಲ.

ಪರೀಕ್ಷಾ ಫಲಿತಾಂಶ

ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾ ಫಲಿತಾಂಶಗಳು ಈ ಬೆಳಿಗ್ಗೆ ಪ್ರಕಟವಾಯಿತು. ನಮ್ಮ ಕಛೇರಿಯಲ್ಲೂ ನೋಡಬಹುದು.

Announcement

Theatre building old materials and furniture are being sold very cheap.

Apply to—
NEW OPERA TALKIES
MYSORE

ಸಂಪುಟ ೪ ಸಂಚಿಕೆ ೩೪ ॥ ಶ್ರೀ ॥ ಶಾ॥ 7-5-1951

— ಪ್ರಬೋಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ ಮುಖಪತ್ರವಾಗಿಲು,
ಶ್ರೀ ಕೃಷ್ಣಾನಂದ ಮಹಾಧೀಶ್ವರರಾದ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ —
ಸಂಪಾದಕ ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಕಾರ್ಯದರ್ಶಿ, ಮೈ. ಧೀ. ವ ಸ್ವ. ಸಂಘ

ಮಾಯೆ

(ಭಟ್ಟ ಸದಾಶಿವ ಶರ್ಮಾ)

(ಮುಂದುವರಿದುದು)

ನಾನು ದೇಹನೆಂಬೀ ಅಜ್ಞಾನದಿಂದ ದೇಹಸಂಗವು ಉತ್ಪನ್ನವಾಯಿತು ; ದೇಹಸಂಗದಿಂದ ಸಂಸಾರವಾಯಿತು. ಅತಪವ ಸಂಗವೇ ಸಂಸಾರಕ್ಕೆ ಕಾರಣ ; ಅದ್ದರಿಂದ ಸಂಗವೇ ಸಂಸಾರದಲ್ಲಿ ಎಲ್ಲಕ್ಕಿಂತ ಪ್ರಬಲವು ಸತ್ಸಂಗದಿಂದ ಒಳ್ಳೇ ಫಲವೂ ಅಸತ್ಸಂಗದಿಂದ ಕೆಟ್ಟ ಫಲವೂ ಆಗುವುದೆಂಬುದನ್ನು ತಿಳಿಯುವು ದೇನೂ ಕಷ್ಟವಲ್ಲ ; ಆದ ದರಿಂದ ಅನಾಚಾರವರ್ಜನ ಹಾಗೂ ಆಚಾರದ ಪಾಲ ನೆಯೇ ಧರ್ಮವು, ಅದೇ ತಪಸ್ಸು, ಅದೇ ಜ್ಞಾನ. ಇತರರೊಂದಿಗೆ ಅಲಾಪ, ಸ್ಪರ್ಶ, ಕಯಿನ ಅಥವಾ ಭೋಜನ ಮಾಡುವುದರಿಂದ ಅವರ ಪಾಪವು ನಮ್ಮನ್ನೇ ರುವುದೆಂದು ಶಾಸ್ತ್ರವು ಹೇಳುತ್ತದೆ— ' ಅಲಾಪಾದ್ ಗಾತ್ರಸಂಸ್ಪರ್ಶಾತ್ ತಯಿನಾತ್ ಸಹಭೋಜನಾತ್ | ಸಂಚರಂತಿ ಹಿ ಪಾಪಾನಿ ತೈಲಬಿಂದುರಿವಾಂಭಸಾ ' (ನಾರದ ಪಂಚರಾತ್ರ). ಆದುದರಿಂದ ಪಾಪಿಯ ಸಂಗವನ್ನೆಂದೂ ಮಾಡಬಾರದು. ಚಾಂಡಾಲನು ಅತ್ಯಂತ ಪಾಪಿಯು ; ಘೋರಪಾಪವಶದಿಂದ ಚಾಂಡಾಲ ಕುಲದಲ್ಲಿ ಜನ್ಮವೆತ್ತುವನು; ಚಾಂಡಾಲರಲ್ಲಿ ಐದು ಪ್ರಕಾರವಿದೆ ಚಾಂಡಾಲ ವಂಶದಲ್ಲಿ ಜನ್ಮವೆತ್ತಿದವನು ಜಾತಿ ಚಾಂಡಾಲನು ; ಪವಿತ್ರ ಬ್ರಾಹ್ಮಣ ಕುಲದಲ್ಲಿ ಜನ್ಮವೆತ್ತಿ ಅಕೃತಜ್ಞನೂ ಅನಾಚಾರಿಯೂ ಕ್ರೋಧಿಯೂ ಶಠನೂ ಆದವನನ್ನು ಆಚಾರದಲ್ಲಿ ಚಾಂಡಾಲನೆಂದು ತಿಳಿಯಬೇಕು— ' ಅಕೃತಜ್ಞಮನಾರ್ಯಂ ಚ ದೀರ್ಘರೋಷಮನಾರ್ಜವ | ಚತುರೋವಿದ್ಧಿ ಚಾಂಡಾಲಾನ್ ಜಾತ್ಯಾ ಭವತಿ ಪಂಚಮಃ (ಗರುಡ ಪುರಾಣ). ಭಗವದ್ವಿಮುಖ ವ್ಯಕ್ತಿಯು ಚಾಂಡಾಲನಿಗಿಂತಲೂ ಮಿಗಿಲಾದ ಪಾಪಿಯು : ಅಂದರೆ ಆಯಾ ವನು ನಾಸ್ತಿಕನೋ, ಶಾಸ್ತ್ರವನ್ನು ನಂಬುವುದಿಲ್ಲವೋ, ಭಗವಂತನ ನಾಮವನ್ನು ಸದಾ ಸ್ಮರಣೆ ಮಾಡುವುದಿಲ್ಲವೋ ಅವನು ಚಾಂಡಾಲನಿಗಿಂತ ಅಧಮನು. ಅತ್ಯಲ್ಪಕ್ಷಣಕ್ಕಾಗಿ ಈ ಎಲ್ಲ ಮನುಷ್ಯನ ಸಂಗವನ್ನು ವಿಷದಂತೆ ತ್ಯಜಿಸಬೇಕು— ' ನರಂ ಹೃತವಹಜ್ವಾಲಂ ಭಕ್ಷ್ಯೋ ವಾಂಛತಿ ಪಿಂಜರಂ | ವರಂ ಚ ಕಂಟಕೇ ವಾಸಂ ವರಂ ಚ ವಿಷಭಕ್ಷಣಂ ॥ ಹರಿಭಕ್ತಿವಿಹೀನತಾನಾಂ ನ ಸಂಗಂ ನಾಶಕಾರಣಂ ' (ಬ್ರಹ್ಮವೈವರ್ತ ಪುರಾಣ) : ' ಚಾಂಡಾಲಾದಧಮಃ ಪಾಪೀ ಶ್ರೀಕೃಷ್ಣವಿಮುಖೋ ಯದಿ | ನಿಷ್ಫಲಸ್ತಸ್ಯ ವೈ ಧರ್ಮೋ ನಾಧಿಕಾರೀ ಸ ಕರ್ಮಣಾಂ ' (ನಾರದ ಪಂಚರಾತ್ರ) ; ' ಶ್ವಪಾಕಮಿವ ನೇಕ್ಷೇತ ಲೋಕೇ ವಿಷ್ಣ ವಮೈಷ್ಣವಂ | ವೈಷ್ಣವೋ ವರ್ಣಬಾಹ್ಯೋಽಪಿ ಪುನಾತಿ ಭುವನತ್ರಯಂ ' (ಪದ್ಮ ಪುರಾಣ).

ಮೂರ್ಖ ನಾಸ್ತಿಕರು ತಮ್ಮ ದುಷ್ಟ ಹಾಗೂ ಅಪರೀಕ್ಷಿತಬುದ್ಧಿಯಿಂದ ಇದನ್ನೇ ಅಸ್ಪೃಶ್ಯತೆಯೆಂದು ಹೇಳಿ ಹೀಯಾಳಿಸುತ್ತಾರೆ ; ಒಬ್ಬೊಬ್ಬ ನಾಸ್ತಿಕನ ಮೂರ್ಖತೆಯು ಪ್ರತ್ಯೇಕ ಅಹಂಕಾರದ ಪರಿಣಾಮವಂತೂ— ಈ ಅಸ್ಪೃಶ್ಯತೆಗಾಗಿ ಪುರುಷ ಶಾಸ್ತ್ರವೂ ಆಗಮಶಾಸ್ತ್ರವೂ ನಿಂದನೀಯವು — ಎನ್ನುವಷ್ಟರ ವರೆಗೆ ಮುಟ್ಟಿದೆ. ಶಾಸ್ತ್ರದ ವಿಧಾನವು ಅನುಪಮನೆಂದೂ ನಿರ್ದೋಷನೆಂದೂ ಹೇಳ ಬೇಕಾಗಿಲ್ಲ ; ಆ ಶಾಸ್ತ್ರಗಳು ಹೀಗೆ ಹೇಳುತ್ತವೆ— ಆತ್ಮರಕ್ಷಣೆಗಾಗಿ ಚಾಂಡಾಲಾದಿಗಳ ಸಂಗವನ್ನು ವಿಷದಂತೆ ತೊರೆಯಿರಿ ಹಾಗೂ ಅಹಂಕಾರದಿಂದ ನಿಮ್ಮನ್ನು ಳಿಸಿಕೊಳ್ಳುವ ಸಲುವಾಗಿ ಅದೇ ಜನರನ್ನು ದಂಡವತ್ ಪ್ರಣಾಮ ಮಾಡಬೇಕು - ' ಪ್ರಣವೇದ್ ದಂಡವದ್ಭೂಮಾವಶ್ವ ಚಂಡಾಲಗೋಖರಂ ' (ಭಾಗವತ)— ಅಂದರೆ ಚಾಂಡಾಲನು ಅತ್ಯಂತ್ಯನಾಗಿ ಅಸ್ಪೃಶ್ಯನು ; ಅಹಂಕಾರ ತ್ಯಾಗಕ್ಕಾಗಿ ಪ್ರಣಾಮ ಮಾಡಲು ಯೋಗ್ಯನು.

ಚಾಂಡಾಲಾದಿಗಳ ಘೋರ ಅಪವಿತ್ರ ದೇಹವನ್ನು ಪವಿತ್ರಗೊಳಿಸುವ ನಿಮಿತ್ತ ಸರ್ವಜ್ಞಶಾಸ್ತ್ರವು ಆಚಾರ ವಸ್ತು ಭಗವದ್ಭಕ್ತಿಯ ವ್ಯವಸ್ಥೆ ಮಾಡಿದೆ. ಮೂರ್ಖ ನಾಸ್ತಿಕರು ಚಾಂಡಾಲಾದಿಗಳ ಅಪವಿತ್ರತೆಯು ಮತ್ತೂ ಹೆಚ್ಚುವಂತಹ ವ್ಯವಸ್ಥೆ ಮಾಡಿ ಅವರನ್ನು ಶುದ್ಧಿಗೊಳಿಸಲಿಚ್ಛಿಸುತ್ತಾರೆ ; ಅನಂತ ಪ್ರಪಂಚದಲ್ಲಿ ಇಂದಿನ ವಿದ್ಯೆ ಧನ ವೃತ್ತಿಗಳನ್ನೂ ಶಾಸ್ತ್ರದ ನಿಂದೆಯನ್ನೂ ಮಾಡುವುದರಿಂದ ಚಾಂಡಾಲರು ಉದ್ಧಾರವಾಗಲಾರದೆ ; ಆದರೆ ಇಂದಿನ ವಿದ್ಯೆಯನ್ನು ಶಾಸ್ತ್ರವು ' ಅವಿದ್ಯೆ ' ಎನ್ನುತ್ತದೆ, ವಿದ್ಯೆಯೆಂದಲ್ಲ : ಕಾರಣ ಈ ವಿದ್ಯೆಯಿಂದ ಸಂಸಾರಿಕ ಲಾಭವಾದೀತೇ ಹೊರತು, ಪರಮಾರ್ಥ ಲಾಭವಾಗುವುದಿಲ್ಲ, ಪರಮಾರ್ಥದ ಹಾನಿಯೇ ಆಗುವುದು. ಶಾಸ್ತ್ರದ ವ್ಯವಸ್ಥೆಯು ಸರಿಯಾದುದು, ಇತರ ವ್ಯವಸ್ಥೆಯು ಚಾಂಡಾಲರ ಸರ್ವನಾಶಕ್ಕೆ ಕಾರಣವು ಎಂದು ಹೇಳಬೇಕಾಗಿಲ್ಲ.

ಯಾವ ಚಾಂಡಾಲನು ಭಕ್ತನೋ ಅವನು ಸ್ವರ್ಗ ಮರ್ತ್ಯ ಪಾತಾಳ, ಮೂರೂ ಭುವನಗಳನ್ನು ಪವಿತ್ರಗೊಳಿಸವನು (ಪದ್ಮಪುರಾಣ) ; ಬ್ರಾಹ್ಮಣನು ಸರ್ವ ಶಾಸ್ತ್ರವನ್ನು ಬಲ್ಲವನಾದರೂ ನಮಗೆ ಪ್ರಿಯನಲ್ಲ : ಆದರೆ ಚಾಂಡಾಲನು ನಮ್ಮ ಭಕ್ತನಾಗುವುದರಿಂದ ಪ್ರಿಯನಾಗುವನು ; ಅದೇ ಚಾಂಡಾಲನಿಗೆ ದಾನ ಮಾಡಬೇಕು ; ಅವನ ಕೈಯಿಂದಲೇ ದಾನಗ್ರಹಣಮಾಡಬೇಕು ; ಹಾಗೂ ಆ ಚಾಂಡಾಲನನ್ನು ಭಗವಂತನಿಗೆ ಸಮವಾಗಿ ಪೂಜೆಮಾಡಬೇಕು— ' ನ ಮೇ ಪ್ರಿಯಶ್ಚತುರ್ವೇದೀ ವದ್ಭಕ್ತಃ ಶ್ವಪಚೋಽಪ್ರಿಯಃ | ತಸ್ಮೈ ದೇಯಂ ತತೋ ಗ್ರಾಹ್ಯಂ ಸ ಚ ಪೂಜ್ಯೋ ಯಥಾ ಹ್ಯಹಂ ' (ಶಿವಪುರಾಣ)

ಚಾಂಡಾಲನ ಮಾತಂತರಲಿ ; ಮ್ಲೇಚ್ಛನಾದರೂ ಸಹ ಭಕ್ತನಾದಲ್ಲಿ ಶ್ರೇಷ್ಠ ಬ್ರಾಹ್ಮಣನೂ ಮುನಿಯೂ ಜ್ಞಾನಿಯೂ ಆಗುವನು — ' ಏವಮಷ್ಟವಿಧಂ ಚಿಹ್ನಂ ಯಸ್ಮಿನ್ ಮ್ಲೇಚ್ಛೇಽಪಿ ವರ್ತತೇ | ಸವಿಪ್ರೇಂದ್ರೋ ಮುನಿಃ ಶ್ರೀಮಾನ್ ಸಯತಿಃ ಸ ಚ ಪಂಡಿತಃ ' (ಶಿವಪುರಾಣ).



ಸೋಮನಾಥಪದಲ್ಲಿ ಇದೇ ತಿಂಗಳ ೧೧ ನೇ ತಾ ಗೆ ಜರುಗಲಿರುವ ಮೂರ್ತಿ ಪ್ರತಿಷ್ಠಾಪನೆಯು ವೇದೋಕ್ತ ರೀತಿಯಲ್ಲಿ ನಡೆಯುವ ಅಶ್ವಾಸನೆ ದೊರೆಯದ್ದರಿಂದ ತಾವು ಆ ಸಮಾರಂಭದಲ್ಲಿ ಭಾಗವಹಿಸುವುದಿಲ್ಲವಾಗಿ ಶ್ರೀ ದ್ವಾರಕಾ ಪೀಠದ ಜಗದ್ಗುರು ಅಭಿನವ ಸಚ್ಚಿದಾನಂದ ತೀರ್ಥ ಶಂಕರಾಚಾರ್ಯರು ತಿಳಿಸಿದ್ದಾರೆ.

Edited, Printed and Published by M. S. Krishna Rao, at the Satyavadi Press Chamrajpuram Mysore